Crl. Misc. **ನಂ.** 1203/2024

**ಪಿ. ಡಬ್ಲ್ಯೂ.**- 1

**ಸಾಕ್ಷಿಯು ದಿನಾಂಕಃ** 07.02.2026 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ** Sri. MSSV **ವಕೀಲರಿಂದಃ**

ಒಮನ್ ದೇಶದಲ್ಲಿ ನನಗೆ 2-3 ತಿಂಗಳ ಶಿಕ್ಷೆ ಆದನಂತರ ನನ್ನ ಪಾಸ್ ಪೋರ್ಟ ರದ್ದತಿ ಆಗಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾನು ಆ ಆದೇಶವನ್ನು ವಜಗೊಳಿಸಲು ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆಂಧ್ರ ಪದೇಶದಲ್ಲಿ ಪ್ರತಿ ಮಗುವಿಗೆ ಉಚಿತವಾಗಿ ಸರ್ಕಾರದಿಂದ ವಾರ್ಷಿಕ ರೂ.15000 ಹಣ, ಉಚಿತ ಶಿಕ್ಷಣ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಲಾಗುತಿದೆ ಎಂದರೆ ನನಗೆ ಗೊತಿಲ್ಲ. ವಿವಾಹ ವಿಚ್ಛೇದನೆ ಆದವರಿಗೆ ಮತ್ತು ವಿಧವೆಯರಿಗೆ ಮಾಸಿಕ ರೂ.4000 ಸಹಾಯ ಧನ ಕೊಡಲಾಗುತಿದೆ ಎಂದರೆ ನನಗೆ ಗೊತಿಲ್ಲ.

ನನ್ನ ಆಧಾರ ಕಾರ್ಡಿನಲ್ಲಿ ಹೊಸಪೇಟೆ ವಿಳಾಸ ನಮೂದಿಸಲಾಗಿದೆ. ನಾನು ಕರ್ನಾಟಕದ ವಿಳಾಸವಿರುವ ಮತ್ತು ಆಂಧ್ರ ಪ್ರದೇಶದ ವಿಳಾಸವಿರುವ 2 ಆಧಾರ ಕಾರ್ಡಗಳನ್ನು ಸರ್ಕಾರದ ಯೋಜನೆಗಳ ಉಪಯೋಗ ಪಡೆಯಲು ಬಳಸುತಿದ್ದೇನೆಂದರೆ ಸರಿಯಲ್ಲ.

ನನ್ನ ದೂರವಾಣಿ ಸಂ.9000894629 ಮತ್ತು 9440576525 ಎಂದು ಇರುತ್ತವೆ. ಸಾಕ್ಷಿ ಮುಂದುವರೆದು 2ನೇ ಸಂಖ್ಯೆ ಎದುರುದಾರನ ಹೆಸರಿನಲ್ಲಿತ್ತು ಈಗ ನನ್ನ ಹೆಸರಿಗೆ ಮಾಡಿಸಿಕೊಂಡು ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಆಧಾರ ಕಾರ್ಡ ಗಳನು ದಿಃ 4.10.2013, 28.3.2015, 11.1.2024, 21.3.2024 ಮತ್ತು 30.5.2025 ರಂದು ತಿದ್ದುಪಡಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ಆದಚಿಾರ ಕರ್ಡನಲ್ಲಿ ಮೊದಲಿಗೆ ಗಂಡನ ಹೆಸರು ವಲಿ ಬಾಷಾ ಎಂದು ನಮೂದು ಇತ್ತು ಎಂದರೆ ಸರಿ. ನಾನು ಈ ಪ್ರಕರಣ ದಾಖಲಿಸುವ ಉದ್ದೇಶದಿಂದಲೇ ಗಂಡನ

ಹೆಸರನ್ನು ತೆಗೆಸಿ, ಕೇರ್ ಆಫ್ ಫರೂಫ್ ಮೊಹಮ್ಮದ್ ಆರೀಫ್ ಎಂದು ನಮೂದಿಸಿ ತಿದ್ದುಪಡಿ ಮಾಡಿಸಿರುತ್ತೇನೆಂದರೆ ಸರಿಯಲ್ಲ.

ನನ್ನ ಮಗಳು ಋತುಮತಿ ಆಗಿದ್ದರಿಂದ ಕಾರ್ಯಕ್ರಮ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದೊಡ್ಡವಳಾಗಿದ್ದಳು ಎಂದರೆ ನಿಜ. ನಾನು ಟೈಲರಿಂಗ್ ಕೆಲಸದಲ್ಲಿ ವಿಶೇಷವಾಗಿ ಜರಿ ಕೆಲಸವನ್ನು ಮಾಡುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ಮಾಡುತಿದ್ದೆ ಈಗ ಮಾಡುತಿಲ್ಲ ಎಂದು ಹೇಳುತ್ತಾರೆ . ನಾನು ಪಾನ್ ಕಾರ್ಡ ಹೊಂದಿರುತ್ತೇನೆಂದರೆ ಸರಿ . ನನ್ನ ಬ್ಯಾಂಕ ಖಾತೆಯಲ್ಲಿ ವ್ಯವಹಾರ ಆಗುತಿರುವುದರಿಂದಲೇ ಪಾನ್ ಕಾರ್ಡ ಉಪಯೋಗಿಸುತ್ತೇನೆಂದರೆ ಸರಿ .

ಎದುರುದಾರನಿಗೆ 6 ಜನ ಅಣ್ಣ ತಮ್ಮಂದಿರು ಮತ್ತು 3 ಅಕ್ಕ ತಂಗಿಯರು ಇರುತ್ತಾರೆಂದರೆ ಸರಿ . ಎದುರುದಾರ ಬಂಡಿ ಗಾಡಿಯಲ್ಲಿ ಹಣ್ಣು ವ್ಯಾಪಾರ ಮಾಡುವ ಸಣ್ಣ ವ್ಯಾಪಾರಿ ಎಂದರೆ ಸರಿಯಲ್ಲ. ನನ್ನ ತಾಯಿ ಆನೆಗುಂದಿ ಗ್ರಾಮದಲ್ಲಿ ವಾಸವಿರುತ್ತಾರೆಂದರೆ ಸರಿ . ಆನೆಗುಂದಿ ನನ್ನ ತಾಯಿಯ 2 ನೇ ಗಂಡನ ಊರು ಎಂದರೆ ಸರಿ . ಆನೆಗುಂದಿಯಲ್ಲಿ ನನ್ನ ತಾಯಿ ತನ್ನ 2 ನೇ ಗಂಡನ ಆಸ್ತಿ ವಿಚಾರವಾಗಿ ಪ್ರಕರಣಗಳನ್ನು ದಾಖಲಿಸಿರುತ್ತಾರೆಂದರೆ ನನಗೆ ಗೊತಿಲ್ಲ. ಎದುರುದಾರನಿಗೆ ಯವುದೇ ಆದಾಯ ಇಲ್ಲ ಮತ್ತು ಆತನ ಅಣ್ಣ ತಮ್ಮಂದಿರ ಅವಲಂಬಿತನಾಗಿರುತ್ತಾನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಬಂಗಾರ ಮತ್ತು ಹಣ ತೆಗೆದುಕೊಂಡಿದ್ದು ಅದು ನನಗೆ ವಾಪಸ್ಸು ಬೇಕೆಂದು ನುಡಿಯುತ್ತಾರೆ. ಎದುರುದಾರನಿಂದ ಹೇಗಾದರೂ ಮಾಡಿ ಹಣ ಮತ್ತು ಬಂಗಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲಲ.

ದಿಃ 10.3.2013 ರಂದು ನಾನು ಎದುರುದಾರನೊಂದಿಗೆ ಮದುವೆ ಆಗಿದ್ದೇನೆಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ಎದುರುದಾರ ದಿಃ 13.6.1996 ರಂದು ಜನಿಸಿದ್ದ ಮತ್ತು ನಾನು ಹೇಳಿರುವ ಮದುವೆ ದಿನಾಂಕದಂದು ಆತ ಅಲ್ಪ ವಯಿ ಆಗಿದ್ದ ಎಂದರೆ ಸರಿ . ಸಾಕ್ಷಿ ಮುಂದುವರೆದು ಅಲ್ಪ ವಯಿ ಆಗಿದ್ದರೂ ಸಹ ನನ್ನೊಂದಿಗೆ ಸಂಪರ್ಕ ಹೊಂದಿ ನನ್ನ ಮಗುವಿಗೆ ತಂದೆ ಇರುತ್ತಾನೆಂದು ನುಡಿಯುತ್ತಾರೆ. ಎದುರುದಾರ ನನ್ನ ಬಳಿ ಬರುತಿದ್ದ ಮತ್ತು ನನ್ನೊಂದಿಗೆ ಸಂಪರ್ಕ ಹೊಂದಿದ್ದ ಎಂದು ಸುಳ್ಳು ನುಡಿಯುತಿದ್ದೇನೆಂದರೆ ಸರಿಯಲ್ಲ. ನಾನು ಎದುರುದಾರನಿಗೆ ತೊಂದರೆ ನೀಡುವ ಉದ್ದೇಶದಿಂದ ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಪೋಕ್ಸೋ ಪ್ರಕರಣ ಆಗುತ್ತದೆಂದು ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಪೋಲಿಸರು ಕ್ರಮ ಕೈಗೊಳ್ಳದ ಕಾರಣ ನ್ಯಾಯಾಲಯಕ್ಕೆ ಬಂದಿರುತ್ತೇನೆಂದು ನುಡಿಯುತ್ತಾರೆ. ನಾನು ಎದುರುದಾರನಿಗೆ ಬ್ಲಾಕ್ ಮೇಲ್ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.